<u>ಅಸಲು ದಾವಾ ಸಂಖ್ಯೆ:- **123/2024**</u> <u>ಪಿ.ಡಬ್ಲ್ಯೂ:-</u> **1**

ದಿನಾಂಕಃ **18-11-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-</u>

ನಿಪಿ-8 ಆರ್ ಟಿ ಸಿ ಯನ್ನು ನಾನು ಹಾಜರುಪಡಿಸಿದ ದಾಖಲೆ ಎಂದರೆ ಸರಿ. ನಿಪಿ-8 ಆರ್ ಟಿ ಸಿ ಯಲ್ಲಿ ಸರ್ವೇ ನಂ.18 ರಲ್ಲಿ ಒಟ್ಟು ವಿಸ್ತೀರ್ಣ 19 ಎಕರೆ 27 ಗುಂಟೆ ಇದ್ದು ಅದರಲ್ಲಿ ಅ ಕರಾಬು ಏನು ಇರುವುದಿಲ್ಲ ಬ ಕರಾಬು 1 ಎಕರೆ 20 ಗುಂಟೆ ಎಂದು ನಮೂದಾಗಿದೆ ಎಂದರೆ ಸರಿ. 1 ಎಕರೆ 20 ಗುಂಟೆ ಬ ಕರಾಬಿನ ಜಮೀನಿನಲ್ಲಿ ದಾವಾ ಪತ್ರದಲ್ಲಿ ನಮೂದಾಗಿರುವ 16 ಗುಂಟೆ ಕರಾಬು ಅದರಲ್ಲಿ ಬರುತ್ತದೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ನಿಪಿ-8 ರ ಪಹಣಿಯಲ್ಲಿ ಸರ್ವೇ ನಂ. 18 ರಲ್ಲಿ ಹುಚ್ಚಪ್ಪ ರೆಡ್ಡಿ ಬಿನ್ ದೊಡ್ಡಭೀಮಪ್ಪ ರೆಡ್ಡಿ 1 ಎಕರೆ 10 ಗುಂಟೆ ಜಮೀನಿನಲ್ಲಿ ಸ್ವಾಧೀನಾನುಭದಲ್ಲಿದ್ದಾರೆ ಎಂದು ನಮೂದಾಗಿದೆ ಎಂದರೆ ಸರಿ. ಅದೇ ರೀತಿ 1 ನೇ ಪ್ರತಿವಾದಿ 23 ಗುಂಟೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. 1 ನೇ ವಾದಿ 1 ಎಕರೆ 16 ಗುಂಟೆ ಜಮೀನಿನಲ್ಲಿ ಸ್ವಾಧೀನಾನುಭವಲ್ಲಿದ್ದಾರೆ ಎಂದರೆ ಸರಿ. ತಿಮ್ಮಪ್ಪರವರು 1 ಎಕರೆ 22 ಗುಂಟೆ, ಬಸಪ್ಪ ಯಾನೆ ಬಸಪ್ಪರೆಡ್ಡಿ ರವರು 1 ಎಕರೆ, ನಾಗರಾಜ ನಾಯ್ಕರವರು 1 ಎಕರೆ 15 ಗುಂಟೆ, ಶಶಿಕಲಾರವರು 30 ಗುಂಟೆ, ಲಷ್ಕರಿ ನಾಯ್ಕ 25 ಗುಂಟೆ, ಗೋವಿಂದಪ್ಪ 25 ಗುಂಟೆ, ಬಾಬಾನಾಯ್ಕರವರು 8 ಎಕರೆ 14 ಗುಂಟೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪ್ರತಿವಾದಿಗಳನ್ನು ಹೊರತುಪಡಿಸಿ ಉಳಿದವರು ಎಲ್ಲರೂ ಸ್ವಾಧೀನಾನುಭದಲ್ಲಿದ್ದಾರೆ ಎಂದು ನುಡಿಯುತ್ತಾರೆ. ಮೇಲ್ಕಂಡ ಎಲ್ಲಾ ವ್ಯಕ್ತಿಗಳು ಬಿಜೋಗಟ್ಟೆ ಗ್ರಾಮದಲ್ಲಿರುವ ಸರ್ವೇ ನಂ.18 ರ ಸಹ ಮಾಲೀಕರು ಎಂದರೆ ಸರಿ.

ನಾನು ಈ ದಾವೆಯಲ್ಲಿ ಸರಿಯಾದ ಪರಿಹಾರವನ್ನು ಕೇಳದೇ ಸುಳ್ಳು ಪರಿಹಾರವನ್ನು ಕೇಳಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ.18 ರಲ್ಲಿ ನಾವು ಹೇಳಿದ ಹಾಗೆ 1 ಎಕರೆ 16 ಗುಂಟೆ ಜಮೀನು ಇರುವುದಿಲ್ಲ. ಅದರಲ್ಲಿ 19 ಎಕರೆ 27 ಗುಂಟೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಜನವರಿ 2024 ರಿಂದ ಮೇ 2024 ವರೆಗೆ ನಾವು ಹೇಳಿದ ದಾವಾ ಆಸ್ತಿಯಲ್ಲಿ ಯಾವುದೇ ಬೆಳೆಯನ್ನು ಬೆಳೆಯುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಯಾವುದೇ ಬೆಳೆಯನ್ನು ಬೆಳೆಯುತ್ತಿಲ್ಲ ಮತ್ತು ಪ್ರತಿವಾದಿಗಳಿಗೆ ತೊಂದರೆಯನ್ನು ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮಗೆ ಸೇರಿದ ಸರ್ವೇ ನಂ.18 ರಲ್ಲಿ 23 ಗುಂಟೆ ಜಮೀನಿನಲ್ಲಿ ಶಾಂತಿಯುತ ಸ್ವಾಧೀನಾನುಭವವನ್ನು ಹೊಂದಿದ್ದು ಅದನ್ನು ತಪ್ಪಿಸುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ರ ಪ್ರಕಾರ 2023 ನೇ ಸಾಲಿನಿಂದಲೂ ಪ್ರತಿವಾದಿಗಳು ಸರ್ವೇ ನಂ.18 ರಲ್ಲಿ 23 ಗುಂಟೆ ಯಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಮೇಲ್ಕಂಡ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.